ANNEXURE-2

ಕರ್ನಾಟಕ ಧನ ವಿನಿಯೋಗ (ಸಂಖ್ಯೆ 2) ವಿಧೇಯಕ 1986.

(1986ರ ವಿಧಾನಸಭಾ ವಿಧೇಯಕ ಕ್ರಮಾಂಕ 18)

1981-82ನೇ ಹಣಕಾಸು ವರ್ಷದಲ್ಲಿ ಕೆಲವು ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಮಂಜೂರು ಮಾಡಿದ ಮೊಬಲಗಿಗೆ ಹೆಚ್ಚಿಗೆಯಾಗಿ ವಹಿಸಿದ ವೆಚ್ಚಗಳನ್ನು ಕ್ರಮಗೊಳಿಸಲು ಅಧಿಕಾರ ನೀಡಲು ಒಂದು ವಿಧೇಯಕ.

1981-82ನೇ ಹಣಕಾಸು ವರ್ಷದಲ್ಲಿ ಕೆಲವು ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಮಂಜೂರು ಮಾಡಿದ ಮೊಬಲಗಿಗೆ ಹೆಚ್ಚಿಗೆಯಾಗಿ ವಹಿಸಿದ ವೆಚ್ಚಗಳನ್ನು ಕ್ರಮಗೊಳಿಸುವುದಕ್ಕಾಗಿ ಅಧಿಕಾರ ನೀಡುವುದು ಯುಕ್ತವಾಗಿರುವುದರಿಂದ.

ಇದು ಭಾರತ ಗಣರಾಜ್ಯದ ಮೂವತ್ತೇಳನೆಯ ವರ್ಷದಲ್ಲಿ ಕರ್ನಾಟಕ ರಾಜ್ಯದ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗಲಿ :—

1. ಸಂಕ್ಷಿಪ್ತ ಹೆಸರು:—ಈ ಅಧಿನಿಯಮವನ್ನು ಕರ್ನಾಟಕ ಧನ ವಿನಿಯೋಗ ಅಧಿನಿಯಮ 1986 ಎಂದು ಕರೆಯತಕ್ಕದ್ದು.

2. ಕರ್ನಾಟಕ ರಾಜ್ಯದ ಸಂಚಿತ ನಿಧಿಯೊಳಗಿಂದ 1981-82ನೇ ಹಣಕಾಸು ವರ್ಷದಲ್ಲಿ ಹೆಚ್ಚಿಗೆಯಾಗಿ ವಹಿಸಿದ ವೆಚ್ಚಗಳನ್ನು ತುಂಬುವುದಕ್ಕಾಗಿ 73,66,55,284 ರೂಪಾಯಿಗಳ ನೀಡಿಕೆ.—ಅನುಸೂಚಿಯ 2ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ಸೇವೆಗಳ ಸಂಬಂಧದಲ್ಲಿ 1981-82ನೇ ಹಣಕಾಸು ವರ್ಷದಲ್ಲಿ ಮಂಜೂರು ಮಾಡಿದ ಮೊಬಲಗಿಗೆ ಹೆಚ್ಚಿಗೆಯಾಗಿ ವಹಿಸಿದ ವೆಚ್ಚಗಳನ್ನು ಕ್ರಮಗೊಳಿಸುವುದಕ್ಕಾಗಿ ಅನುಸೂಚಿಯ 5ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾಗಿರುವ ಎಪ್ಪತ್ತಮೂರು ಕೋಟಿ ಅರವತ್ತಾರು ಲಕ್ಷ ಐವತ್ತೈದು ಸಾವಿರದ ಎರಡನೂರ ಎಂಬತ್ತನಾಲ್ಕು ರೂಪಾಯಿಗಳ ಮೊಬಲಗನ್ನು ಮಾತ್ರ ಕರ್ನಾಟಕ ರಾಜ್ಯ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯವಾಗಿ ಉಪಯೋಗಿಸಲಾಗಿದೆ ಎಂದು ಭಾವಿಸತಕ್ಕದ್ದು.

3. ಧನ ವಿನಿಯೋಗ:—ಈ ಅಧಿನಿಯಮವ ಮೂಲಕ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡಲು ಮತ್ತು ಉಪಯೋಗಿಸಲು ಅಧಿಕಾರ ನೀಡಲಾದ ಮೊತ್ತಗಳನ್ನು 1981-82ನೇ ವರ್ಷಕ್ಕೆ ಸಂಬಂಧಪಟ್ಟಂತೆ ಅನುಸೂಚಿಯಲ್ಲಿ ತಿಳಿಸಲಾದ ಸೇವೆಗಳು ಮತ್ತು ಉದ್ದೇಶಗಳಿಗಾಗಿ ವಿನಿಯೋಗಿಸಿದೆ ಎಂದು ಭಾವಿಸತಕ್ಕದ್ದು.

ಅನುಸೂಚಿ

(2 ಮತ್ತು 3ನೇ ಪ್ರಕರಣಗಳನ್ನು ನೋಡಿ)

ಬೇಡಿಕೆ ಸಂಖ್ಯೆ	ಸೇವೆಗಳು ಮತ್ತು ಉದ್ದೇಶಗಳು	ವಿಧಾನ ಸಭೆಯಿಂದ ಪ್ರಸ್ತಾವಿತವಾದುದನ್ನು	ಸಂಚಿತ ನಿಧಿಯಿಂದ ಪ್ರಭೃತವಾದುದನ್ನು	ಒಟ್ಟು
		ಮೀರದ ಮೊಬಲಗು		
1	2	3	4	5
1	ವ್ಯವಸಾಯ (ತೋಟಗಾರಿಕೆ ಮತ್ತು ಬರಗಾಲಕ್ಕೆ ಗುರಿಯಾದ ಪ್ರದೇಶಗಳ ಯೋಜನೆ ಹೊರತು)(ಬಂಡವಾಳ)	40,75,813	...	40,75,813
7	ಚಿಕ್ಕ ಪುಟ್ಟ ಉದ್ಯಮಗಳು (ರಾಜಸ್ವ)	15,47,513	....	15,47,513
	(ಬಂಡವಾಳ)	37,28,879	...	37,28,879
11	ಯುವಜನ ಸೇವೆಗಳು (ಬಂಡವಾಳ)	2,00,000	....	2,00,000
13	ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ (ರಾಜಸ್ವ)	7,96,32,683	....	7,96,32,683
—	ಆಂತರಿಕ ಋಣ, ಕೇಂದ್ರ ಸರ್ಕಾರದಿಂದ ಸಾಲ ಮತ್ತು ಆಂತರ ರಾಜ್ಯ ವ್ಯವಹಾರಕ್ಕೆ (ಬಂಡವಾಳ)	....	34,09,51,661	34,09,51,661
16	ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳು (ರಾಜಸ್ವ)	7,02,38,787	...	7,02,38,787
18	ಸಾಮಾಜಿಕ ಸುರಕ್ಷತಾ ಯೋಜನೆಗಳ ಮೇರೆಗೆ ವಿಮೆ ಮತ್ತು ನಿವೃತ್ತಿ ವೇತನಗಳು (ರಾಜಸ್ವ)	1,27,67,487	...	1,27,67,487
19	ವಿವಿಧ ಸಾಮಾನ್ಯ ಸೇವೆಗಳು (ರಾಜಸ್ವ)	22,19,726	....	22,19,726
21	ಅರಣ್ಯ (ರಾಜಸ್ವ)	....	11,32,304	11,32,304
27	ರಸ್ತೆ ಸಾರಿಗೆ (ಬಂಡವಾಳ)	400	...	400

29	ಜನಾರೋಗ್ಯ (ರಾಜಸ್ವ)	3,54,88,713	...	3,54,88,713
34	ನೀರಾವರಿ, ಜಲಸಂಚಾರ, ಒಳಚರಂಡಿ ವ್ಯವಸ್ಥೆ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳು (ರಾಜಸ್ವ)	10,32,226	—	10,32,226
38	ರಾಜ್ಯಪಾಲರು ಮಂತ್ರಿಗಳು ಮತ್ತು ಲೋಕ ಸೇವಾ ಆಯೋಗ (ರಾಜಸ್ವ)	1,82,280	—	1,82,280
40	ಜಿಲ್ಲಾಪಳಿತ (ರಾಜಸ್ವ)	23,94,603	—	23,94,603
41	ಮುಖ್ಯಮಂತ್ರಿಯವರ ವಿವಿಧ ಅಭಿಯಾಚನೆ (ರಾಜಸ್ವ)	29,17,821	—	29,17,821
43	ಲೋಕೋಪಯೋಗಿ ಕಾಮಗಾರಿ (ನಿರ್ಮಾಣ ರಹಿತ) (ರಾಜಸ್ವ)	7,31,49,086	1,08,303	7,32,57,389
44	ಕಟ್ಟಡಗಳು (ರಾಜಸ್ವ)	1,84,45,418	—	1,84,45,418
45	ರಸ್ತೆಗಳು ಮತ್ತು ಸೇತುವೆಗಳು (ಬಂಡವಾಳ)	3,86,956	—	3,86,956
46	ರೇವು ಮತ್ತು ಜಲಸಾರಿಗೆ ಸೇವೆಗಳು (ಬಂಡವಾಳ)	34,93,668	—	34,93,668
50	ನೈಸರ್ಗಿಕ ವಿಕೋಪಗಳ ಬಗ್ಗೆ ಪರಿಹಾರ(ರಾಜಸ್ವ)	1,27,19,648	—	1,27,19,648
56	ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ (ರಾಜಸ್ವ)	6,33,82,748	—	6,33,82,748
58	ಗ್ರಾಮಾಂತರ ಸಂಘಟನಾ ಅಭಿವೃದ್ಧಿ ಯೋಜನೆ (ಬಂಡವಾಳ)	1,440	—	1,440
62	ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ (ರಾಜಸ್ವ)	64,57,121	—	64,57,121
	ಒಟ್ಟು ಜುಮ್ಲಾ	39,44,63,016	34,21,92,268	73,66,55,284

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

1981-82ನೇ ಹಣಕಾಸು ವರ್ಷದಲ್ಲಿ ಕೆಲವು ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಮಂಜೂರು ಮಾಡಲಾದ ಮೊಬಲಗಿಗಿಂತ ಹೆಚ್ಚಿಗೆಯಾಗಿ ವಹಿಸಿದ ವೆಚ್ಚಗಳನ್ನು ಕ್ರಮಗೊಳಿಸಲು ಭಾರತ ಸಂವಿಧಾನದ 205(1)(ಬಿ) ನೇ ಅನುಚ್ಛೇದದ ಉಪಬಂಧಗಳಿಗನುಸಾರವಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ರಾಮಕೃಷ್ಣ ಹೆಗಡೆ,
ಮುಖ್ಯಮಂತ್ರಿ.

ಕೆ. ಎಸ್. ಸಿಂಗ್ರಿ ಗೌಡ
ಕಾರ್ಯದರ್ಶಿ.